<u>ಸಾಕ್ಷಿಯನ್ನು ದಿಃ 07.08.2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು</u>

<u>ಮುಂದುವರೆದ ಪಾಟೀಸವಾಲು ವಾದಿ ಪರ ಶ್ರೀ ಕೆ ಪಿ ಎಂ ವಕೀಲರಿಂದಃ</u>

ನಿಡಿ-30 ರಲ್ಲಿ ನನ್ನ ಸಹೋದರ ರಾಜೇಶ್ ರವರಿದ್ದಾಗಲಿ ಅವರ ಹೆಂಡತಿ ಅನಿತಾ ರವರಿದ್ದಾಗಲಿ ಸಹಿ ಇಲ್ಲ ಎಂದರೆ ಸರಿ. ನಿಡಿ-30 ರಲ್ಲಿ ಡಿಡಬ್ಲೂ-3 ರವರ ಪೂರ್ಣ ವಿಳಾಸ ಇರುವುದಿಲ್ಲ ಎಂದರೆ ಸರಿ. ನಿಡಿ-30 ರಲ್ಲಿ ನಿಡಿ-29 ರ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಿಡಿ-29 ರ ಬಗ್ಗೆ ನನಗೆ ವಾದಿಯ ಗಂಡ ಮಧುಸೂಧನ್ ರವರು ಹೇಳಿರುತ್ತಾರೆ. ಈ ಕುರಿತು ಮಧುಸೂಧನ್ ರವರು ನನ್ನ ಅಣ್ಣನಿಗೆ ಜಿ ಪಿ ಎ ಮಾಡಿಕೊಡುತ್ತಿರುವ ಬಗ್ಗೆ ಹೇಳಿರುತ್ತಾರೆ. ಸದರಿ ವಿಚಾರವನ್ನು ನಾನು ಖರೀದಿ ಮಾಡಿದ 15 ದಿನಗಳ ನಂತರ ಹೇಳಿರುತ್ತಾರೆ. ನಿಡಿ-29 ಅನ್ನು 1 ನೇಪ್ರತಿವಾದಿಗೆ ಮಾಡಿಕೊಟ್ಟ ಬಗ್ಗೆ ವಾದಿಗೆ ನೊಟೀಸ್ ನೀಡಿರುವುದಿಲ್ಲ. ನಿಡಿ-30 ಅನ್ನು ವಕೀಲರ ಕಚೇರಿಯಲ್ಲಿ ತಯಾರಿಸಿರುತ್ತೇವೆ. ನಿಡಿ-29 ಅನ್ನು ಎಲ್ಲಿ ತಯಾರಿಸಿದ್ದಾರೆಂದು ನನಗೆ ಗೊತ್ತಿಲ್ಲ. ನಿಡಿ-29 ಕ್ಕೆ ನಾನು ಒಪ್ಪಿಗೆ ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ನಿಡಿ-29 ಅನ್ನು 1 ನೇಪ್ರತಿವಾದಿಗೆ ಮಾಡಿಕೊಟ್ಟ ಬಗ್ಗೆ ಇದುವರೆಗವಿಗೂ ನಾನು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ನಿಡಿ-29 ರಲ್ಲಿ ನಿಡಿ-30 ರ ಬಗ್ಗೆ ನಮೂದು ಇರುವ ಬಗ್ಗೆ ನಾನು ಓದಿ ತಿಳಿದುಕೊಂಡಿರುವುದಿಲ್ಲ. ಅದರ ವಿವರಗಳು ನನಗೆ ಗೊತ್ತಿರುವುದಿಲ್ಲ.

1 ನೇಪ್ರತಿವಾದಿಯ ವಿವಾಹ 1998 ರಲ್ಲಿ ಆಗಿರುತ್ತದೆ. ಅಂದಿನಿಂದಲೂ ಇಲ್ಲಿಯವರೆಗೆ 1, 2 ನೇ ಪ್ರತಿವಾದಿ ಇಲ್ಲಿಯೇ ಇದ್ದಾರೆಂದರೆ ಸಾಕ್ಷಿಯು ಮುಂದುವರೆದು 5-6 ವರ್ಷದಿಂದ ಬೆಂಗಳೂರಿನಲ್ಲಿ ವಾಸ ಇರುತ್ತಾರೆ. ಪ್ರತಿವಾದಿ 1,2 ರವರ ಮಧ್ಯೆ ವಿಚ್ಛೇದನ ಆಗಿರುವುದಿಲ್ಲ. 2 ನೇಪ್ರತಿವಾದಿಯ ಹೆಸರಿನಲ್ಲಿ ನಿವೇಶನದ ಕ್ರಯಪತ್ರವಾಗಿರುತ್ತದೆ, ಅದನ್ನು ಯಾರು ಮಾಡಿಕೊಟ್ಟಿದ್ದಾರೆಂದು ನನಗೆ ಗೊತ್ತಿಲ್ಲ. 2004 ರಲ್ಲಿ ನಿಡಿ-30 ಆದ ನಂತರ ವಾದಿಯು ಬೇರೆಯವರಿಗೆ ನಿವೇಶನ ಮಾರಾಟ ಮಾಡಿದ ಬಗ್ಗೆ ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ನಿಡಿ-30 ರ ಪ್ರಕಾರ ಕ್ರಯಪತ್ರ ಮಾಡಿಕೊಡುವಂತೆ ಕೋರಿ 1 ನೇಪ್ರತಿವಾದಿಗೆ ಯಾವುದೇ ನೊಟೀಸ್ ನೀಡಿರುವುದಿಲ್ಲ, ಯಾವುದೇ ದಾವೆ ದಾಖಲಿಸಿರುವುದಿಲ್ಲ. 1 ನೇಪ್ರತಿವಾದಿಯು 2 ನೆಪ್ರತಿವಾದಿಗೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ. ಪ್ರತಿವಾದಿ 1, 2 ರವರು ಒಂದೇ ಮನೆಯಲ್ಲಿ ವಾಸವಿದ್ದಾರೆಂದರೆ ಸರಿ.

ನಿಡಿ-6 ಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ. ನಿಡಿ-6 ಆದ ನಂತರ ನಾನು ನಿಡಿ-30 ರಂತೆ ನನ್ನ ಹೆಸರಿಗೆ ಕ್ರಯ ಕರಾರು ಪತ್ರ ಇದ್ದು, ಅದರಂತೆ ನನಗೆ ಕ್ರಯಪತ್ರ ಮಾಡಿಕೊಡಬೇಕೆಂದು ಕೋರಿ ಯಾವುದೇ ದಾವೆ ಸಲ್ಲಿಸಿರುವುದಿಲ್ಲ.

ಡಿಡಬ್ಲೂ 2 ರವರ ಪರಿಚಯ ಇರುವುದಿಲ್ಲ. ಈ ದಾವೆಯನ್ನು ವಾದಿಯು ಪುರುಷೊತ್ತಮ್ ರವರ ವಿರುದ್ದ ಸಲ್ಲಿಸಿರುತ್ತಾರೆ. ನಾನು 3 ನೇಪ್ರತಿವಾದಿಯ ಪರವಾಗಿ ಸಾಕ್ಷಿ ನುಡಿಯಲು ಬಂದಿರುತ್ತೇನೆ. ಅವರ ಪರಿಚಯ ಇತ್ತೀಚೆಗೆ ಆಗಿರುತ್ತದೆ. 3 ನೇಪ್ರತಿವಾದಿಯು ನನ್ನ ಹೆಸರಿಗೆ ಯಾವುದೇ ಕ್ರಯ ಕರಾರು ಆಗದೇ ಇದ್ದರೂ ನಾನೇ ಸೃಷ್ಟಿ ಮಾಡಿರುತ್ತಾರೆಂದು ಅವರು ಹೇಳಿರುತ್ತಾರೆಂದರೆ ಸರಿಯಲ್ಲ. ವಾದಿಯು ದಾವಸ್ವತ್ತಿನಲ್ಲಿ ಕಟ್ಟಡ ನಿರ್ಮಾಣ ಮಾಡಲು ಹೋದಾಗ 3 ನೇಪ್ರತಿವಾದಿಯು ಅಡ್ಡಿ ಪಡಿಸಿದ್ದಾರೆಂದರೆ ಸರಿಯಲ್ಲ. ಈ ಕುರಿತು ವಾದಿಯು ನಮ್ಮ ವಿರುದ್ದ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಈ ಕುರಿತು ನಾನು ಠಾಣೆಗೆ ಹೋಗಿ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ನಿಡಿ-30 ದಾಖಲಾತಿಯನ್ನು ಸೃಷ್ಟಿ ಮಾಡಿಕೊಂಡ ಬಗ್ಗೆ ವಾದಿಗೆ ತಿಳಿದು ಬಂದಿದೆ ಎಂದರೆ ಸರಿಯಲ್ಲ. ಆ ಕಾರಣದಿಂದ ಇದುವರೆಗೂ ನಾನು ನಿಡಿ-30 ನನ್ನ ಹೆಸರಿನಲ್ಲಿದ್ದರೂ ವಾದಿಯ ವಿರುದ್ದ ಯಾವುದೇ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿಯಲ್ಲ. ನಿಡಿ-30 ಅನ್ನು 2012 ರಲ್ಲಿ ನಾನು ಉಳಿದ ಸಾಕ್ಷಿದಾರರೊಂದಿಗೆ ಸೇರಿ ಸೃಷ್ಟಿ ಮಾಡಿದ್ದೇನೆಂದರೆ ಸರಿಯಲ್ಲ. ಸದರಿ ವಿಚಾರ ವಾದಿಗೆ ತಿಳಿದುಬಂದ ನಂತರ ವಾದಿಯು ಈ ದವೆಯನ್ನು ಸಲ್ಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ನಿಡಿ-30 ರಲ್ಲಿ ನೀಡಿದ ಹಣವನ್ನು ಹಿಂತಿರುಗಿಸುವಂತೆ ವಾದಿಗೆ ಇದುವರೆವಿಗೂ ಯಾವುದೇ ನೊಟೀಸ್ ನೀಡಿರುವುದಿಲ್ಲ. ವಾದಿಯು ನಿಡಿ-30 ಅನ್ನು ಮಾಡಿಕೊಡದೇ ಇದುದ್ದರಿಂದ ನಾನು ಯಾವುದೇ ನೊಟೀಸ್ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಇತರೆಯವರು ಸೇರಿಕೊಂಡು ವಾದಿಗೆ ನಷ್ಟ ಉಂಟು ಮಾಡಲು ನಿಡಿ-29 ಅನ್ನು ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ನನಗೆ 2004 ರಲ್ಲಿ 40 ಸಾವಿರ ರೂ. ನೀಡಲು ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ದಾವಸ್ವತ್ತು 15 ಲಕ್ಷ ರೂ ಬೆಲೆ ಇದ್ದು ಅದನ್ನು ಹೊಡೆದು ಕೊಳ್ಳಲು ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇನೆಂದರೆ ಸರಿಯಲ್ಲ. ಡಿಡಬ್ಲೂ-3 ರವರ ಸಂಬಂಧಿ ನಗರಸಭೆ ಅಧ್ಯಕ್ಷರಾದ ದಯಾಳನ್ ರವರು ಎಂದರೆ ಸರಿಯಲ್ಲ. ನಾನು, ಡಿಡಬ್ಲೂ-3, ದಯಾಳನ್ ರವರು ಸೇರಿ

ನಗರಸಭೆ ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇವೆಂದರೆ ಸರಿಯಲ್ಲ. ಸೃಷ್ಟಿ ಮಾಡಿದ ವಿಚಾರ ಗೊತ್ತಾಗುತ್ತದೆ ಎಂಬ ಕಾರಣದಿಂದ 2 ನೇಪ್ರತಿವಾದಿ ಇಂದ ನಮ್ಮ ಅಂಗಡಿಯ ಕೆಲಸಗಾರನಾದ 3 ನೇಪ್ರತಿವಾದಿ ಹೆಸರಿಗೆ ಕ್ರಯಪತ್ರ ಮಾಡಿಕೊಟ್ಟಿರುತ್ತೇವೆಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯು ನನಗೆ ನಿಡಿ-30 ರಂತೆ ಹಣ ಪಡೆದು ಯಾವುದೇ ಕರಾರು ಪತ್ರ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಡಿ-30 ರಲ್ಲಿರುವ ಸಹಿ ವಾದಿಯದ್ದಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

(ಮಂಜುನಾಥ. ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಅಪರ ಜೆ ಎಂ ಎಫ್ ಸಿ, ಕೆ ಜಿ ಎಫ್